


ಸೊಸೆ: ಏನ್ರೀ, ನಿಮ್ಮಪ್ಪ ಸಿಟಿಗೆ ಬಂದು ತುಂಬಾ ದಿನ ಆಯ್ತಲ್ಲ.. ಯಾವಾಗ ವಾಪಾಸು ಹೋಗ್ತಾರೆ ಎಂದು ಹೇಳಿದ್ರಾ?

ಮಗ: ಇಲ್ಲ ಕಣೇ ಹೇಳಿಲ್ಲ.

ಮೊಮ್ಮಗ: ಇನ್ನೆರಡು ದಿನ, ಹೋಗ್ತಾರೆ ಅಮ್ಮಾ.

ಸೊಸೆ: ಓಹೋ, ನಿನ್ನ ಬಳಿ ಹೇಳಿದ್ರಾ?

ಮೊಮ್ಮಗ: ಇಲ್ಲ.. ಊರಿಂದ ತಂದಿದ್ದ ಅವರ ನಶ್ಯ ಖಾಲಿಯಾಗ್ತಿದೆ. ಅವರ ಬ್ರ್ಯಾಂಡ್ ನಶ್ಯ ಇಲ್ಲಿ ಸಿಗಲ್ಲ.. ಊರಲ್ಲೇ ಸಿಗೋದು ಅದಕ್ಕೆ.

★★★

ಯಮುನಮ್ಮ: ಎಂತಹ ಹೇಸಿಗೇರಿ ನಿಮ್ದು! ಬೆಳಿಗ್ಗೆ ಆರು ಗಂಟೆಗೇ ಶುರುವಾಗುತ್ತಲ್ರೀ ನಿಮ್ಮನೇಲಿ ಅತ್ತೆ ಸೊಸೆ ಜಗಳ ನಾಚಿಕೆಗೇಡು!

ಕಮಲಮ್ಮ: ಹೌದು ಯಮುನಕ್ಕ.. ಎಲ್ಲ ನನ್ನ ಗ್ರಹಚಾರ! ಅದ್ಸರಿ, ನಿಮ್ಮನೇಲಿ ಜಗಳ ಇಲ್ವಾ?

ಯಮುನಮ್ಮ: ಇದೆ.. ಆದರೆ ಎಂಟೂವರೆ ಮೇಲೆ.

ಕಮಲಮ್ಮ: ಹಂಗಾ? ಅದ್ಯಾಕೆ?

ಯಮುನಮ್ಮ: ನನ್ನ ಸೊಸೆ ಏಳೋದೇ ಅಷ್ಟು ಹೊತ್ತಿನ ನಂತರ ಕಣ್ರೀ!

**(ಸಂಗ್ರಹ) ರವಿರಾಜ ಹಾಲಂಬಿ**

ಒಂದು ಸಂಜೆ ಹೆಂಡತಿ ಮಾತಾಡ್ತಾ ಕುಳಿತಿದ್ದರು. ಹೆಂಡತಿಗೆ ಒಂದು ಸಂದೇಹ ಬಂತು. ಗಂಡನನ್ನು ಕೇಳಿದಳು. 'ಋಣಾನುಬಂಧ ರೂಪೇಣ ಪಶು ಪತ್ನಿ ಸುತ ಆಲಯ' ಅಂತ ಹೇಳ್ತಾರಲ್ಲ, ಪತೀನೇ ಇಲ್ಲವಲ್ಲ ಇದರಲ್ಲಿ'.

ಅದಕ್ಕೆ ಗಂಡ ಕಾಡಪ್ಪ ಹೇಳಿದ 'ಪಶು ಅಂದರೆ ಇನ್ನಾರು ಗಂಡನೇ'.

★★★

ರಾಮು: ಚಿಂಟು ಏಕೆ ಆ ಇರುವೆಯನ್ನು ಬೆಂಕಿ ಪೆಟ್ಟಿಗೆಯಲ್ಲಿ ಹಾಕುತ್ತಿದ್ದೀಯಾ?

ಚಿಂಟು: ಚಾಕಲೇಟ್ ಇಟ್ಟಿರುವ ಸ್ಥಳ ಈ ಇರುವೆ ನೋಡಿದೆ. ಉಳಿದ ಇರುವೆಗಳಿಗೆ ಹೇಳದಂತಿರಲು ಇದನ್ನು ಈ ಪೆಟ್ಟಿಗೆಯಲ್ಲಿ ಹಾಕಿ ಬಂಧಿಸುತ್ತಿರುವೆ.

★★★

ಗುಂಡ ನಲ್ವತ್ತು ವರ್ಷ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿ ರಿಟೈರ್ ಆಗಿದ್ದ. ರಾತ್ರಿ ಎಲ್ಲಿಗೋ ಹೋಗಿ ಬಂದವನೇ ಮನೆಯ ಬಾಗಿಲ ಬಳಿ ಏನನ್ನೋ ಹುಡುಕುತ್ತಿದ್ದ.

ಹೆಂಡತಿ: ಏನು ಹುಡುಕುತ್ತಿದ್ದೀರಿ?

ಗುಂಡ: ಪಂಚಿಂಗ್ ಮಿಷನ್

**(ಸಂಗ್ರಹ) ಕುಬೇರಪ್ಪ ಎಂ.ವಿಭೂತಿ, ಹರಿಹರ**

